

ಒಪ್ಪಿಸುವುದು ಭಾರೀ ಸವಾಲಿನ ಸಂಗತಿ. ಮಕ್ಕಳಿಗೆ ಕಥೆ ಹೇಳಿದವರಿಗೇ ಗೊತ್ತು, ಕಥೆ ಹೇಳುವ ಕಷ್ಟ ಎಂತಹುದೆನ್ನುವುದು. ಅಮ್ಮ–ಅಪ್ಪ ಆಗಿರಬಹುದು, ಟೀಚರ್ ಆಗಿರಬಹುದು, ಕಥೆ ಹೇಳುವುದು ಯಾರಿಗಾದರೂ ಸವಾಲಿನ ಕೆಲಸ. ಮಕ್ಕಳು ಚಿಕ್ಕವರು, ಅವರಿಗೆ ಕಥೆ ಹೇಳಲು ಪೂರ್ವ ತಯಾರಿಯೇನೂ ಬೇಡವೆಂದು ಭಾವಿಸಿದರೆ ಹೇಳುವವರು ಸೋತರೆಂದೇ ಲೆಕ್ಕ. ಪುಟಾಣಿಗಳು ಕೇಳುವ ಪ್ರಶ್ನೆಗಳ ಬಾಣವನ್ನು ಎದುರಿಸಲು ಸರಿಯಾದ ಉತ್ತರವನ್ನು ಸಿದ್ಧಪಡಿಸಿಕೊಳ್ಳುವುದು ಬಹು ಮುಖ್ಯ. ಸ್ವಚ್ಛವಾದ ಮನಸ್ಸಿನ ಮಕ್ಕಳಲ್ಲಿ ಎಂತೆಂಥ ಪ್ರಶ್ನೆಗಳು ಮೂಡುತ್ತವೆಂದು ನಿರೀಕ್ಷಿಸುವುದು ಎಂಥ ಸವ್ಯಸಾಚಿಗೂ ಕಷ್ಟ.

ಕಾತ್ಯಾಯಿನಿ ಎನ್ನುವ ಅಮ್ಮನ ಅನುಭವ ಕೇಳಿ. ಕಥೆ ಹೇಳಿ ಹೇಳಿ ಅವರಿಗೆ ತಮ್ಮ ಬತ್ತಳಿಕೆ ಖಾಲಿಯಾಗಿದೆ ಅನ್ನಿಸಿದೆ. ಇಂದು ರಾತ್ರಿ ಮಗಳಿಗೆ ಯಾವ ಕಥೆ ಹೇಳುವುದು ಎಂದು ಹಗಲಿಡೀ ಯೋಚಿಸುವುದು, ಆ ಯೋಚನೆ ಒತ್ತಡವಾಗಿ ಬದಲಾಗುವುದು ಸಾಮಾನ್ಯವಾಗಿದೆ. ಒಂದುದಿನ ಹೀಗಾಯಿತು: ಕಾತ್ಯಾಯಿನಿ ತಮ್ಮ ನಾಲ್ಕು ವರ್ಷದ ಮಗಳಿಗೆ ಹಾವು ಮತ್ತು ಮುಂಗುಸಿಯ ಕಥೆ ಹೇಳಲು ಶುರು ಮಾಡಿದರು. ಕಥೆಗೆ ಪೂರಕವಾಗಿ, ‘ಹೇಳಿದ್ದು ಸುಳ್ಳಾಗಬಹುದು, ಕೇಳಿದ್ದು



ಮಗನಿಗೆ ಕಥೆ ಹೇಳಬೇಕೆಂದು ಕುಳಿತಾಗ ತುಂಬಾ ಯೋಚನೆ ಮಾಡುತ್ತೇನೆ. ಪೇರೆಂಟಿಂಗ್ ಪರಿಕಲ್ಪನೆಯೇ ಇಂದು ಬದಲಾಗುತ್ತಿದೆ. ನಮ್ಮ ಹಿಂದಿನ ತಲೆಮಾರಿನವರು ಮಕ್ಕಳನ್ನು ಬೆಳೆಸಿದ ಮಾದರಿಯಲ್ಲಿಯೇ ನಾವಿಂದು ಮಕ್ಕಳನ್ನು ಬೆಳೆಸುವುದು ಸಮಂಜಸ ಅನಿಸುವುದಿಲ್ಲ. ಹಳೆಯ ಕಥೆಗಳನ್ನು ಅವುಗಳು ಇದ್ದ ಹಾಗೆಯೇ ಮರು ಮುದ್ರಿಸಿ, ಮಕ್ಕಳಿಗೆ ಒದಗಿಸುವುದು ಕೂಡ ಸರಿ ಕಾಣುವುದಿಲ್ಲ. ನಮ್ಮ ಕಥಾಭಂಡಾರದಲ್ಲಿ ಸಾಕಷ್ಟು ಮರುನಿರೂಪಣೆಯ ಅವಶ್ಯಕತೆ ಇದೆ.

–ಕುಂಟಾಡಿ ನಿತೀಶ್, ಲೇಖಕ